

# ಅಣಬೆಗಳ ಅವತಾರ

ಚಿತ್ರ– ಬರಹ:
ದತ್ತಾತ್ರೇಯ ಭಟ್ಟ ಕಣ್ಣಿಪಾಲ





ಹಸಿರು ಪರಿಸರದಲ್ಲಿ ನೆಲದಾಳದಿಂದ ಪುಟಿದೇಳುವ ಅಣಬೆಗಳಿಗೆ ಲೆಕ್ಕವಿಲ್ಲ. ಬೇಸಿಗೆಯಲ್ಲಿ ಒಣಗಿದ ತರೆಗೆಲೆಗಳೆಲ್ಲ ಕೊಳೆತು ಮಣ್ಣಿನ ಆಂತರ್ಯದಿಂದ ಮೊಳಕೆಯೊಡೆದು ಬರುವ ಈ ನಾಯಿಕೊಡೆಗಳು ಅರಳುವ ಪರಿಯೇ ವಿಶಿಷ್ಟ. ಬಗೆಬಗೆಯ ಅಣಬೆಗಳಲ್ಲಿ ಕೆಲವು ಅಣಬೆಗಳು ತಿನ್ನಲು ಯೋಗ್ಯವಾಗಿದ್ದು ಔಷಧೀಯ ಗುಣಗಳನ್ನೂ ಹೊಂದಿವೆ. ಇನ್ನೂ ಕೆಲವು ವಿಷಕಾರಿಯಾಗಿದ್ದು ಜೀವಕ್ಕೆ ಅಪಾಯ ಒಡ್ಡುತ್ತವೆ.

ಈ ಅಣಬೆಗಳ ಆಯುಷ್ಯವು ಗಂಟೆಗಳ ಲೆಕ್ಕದಲ್ಲಿ ಅಥವಾ ಒಂದೆರಡು ದಿನಗಳ ಅವಧಿ ಮಾತ್ರ. ಬಣ್ಣ ಬಣ್ಣದ ಹೂವುಗಳಂತೆ, ಬಟ್ಟೆಯ ಚೂರು ಹಾಸಿದಂತೆ, ಮುತ್ತಿನ ಮಣಿಗಳ ಪೋಣಿಸಿದ ಸರದಂತೆ, ಜೇನು ತುಪ್ಪದ ರಟ್ಟಿನಂತೆ, ದೇವಸ್ಥಾನಗಳಲ್ಲಿ ತೂಗು ಹಾಕಿರುವ ಘಂಟೆಗಳಂತೆ, ಯಕ್ಷಗಾನದ ಕಿರೀಟದಂತೆ, ಅಷ್ಟೇ ಏಕೆ? ತಾಜಾ ಐಸ್ ಕ್ರೀಂ, ಕೇಕ್ ಗಳಂತೆ ಈ ಅಣಬೆಗಳದ್ದು ನೂರೆಂಟು ರೂಪ. ಕೆಲವಂತೂ ಮನುಷ್ಯನ ಪ್ರತಿಕೃತಿಗಳಂತಾಗಿದ್ದರೆ ಇನ್ನು ಕೆಲವು ಪ್ರಾಣಿಗಳ ಮುಖವಾಡಗಳಂತೆ ಕಾಣಿಸುತ್ತವೆ. ಚಿತ್ರ ಕಲಾವಿದರಿಗೆ ವಿಶಿಷ್ಟ ವಿನ್ಯಾಸಗಳ ವಿಶ್ವರೂಪವನ್ನೇ ತೋರುತ್ತವೆ.

ಮಲೆನಾಡಿನಲ್ಲಿ ಸಾಸಿವೆ ಕಾಳಿನ ಆಕಾರದಿಂದ ಹಿಡಿದು ಕುಂಬಳಕಾಯಿಯ ಗಾತ್ರದ ಅಣಬೆಗಳೂ ಕಾಣಸಿಗುತ್ತವೆ. ಈ ಚಿತ್ರದಲ್ಲಿರುವ ಚಿತ್ರ ವಿಚಿತ್ರ ಅಣಬೆಗಳು ಅರಳಿದ್ದು ಯಲ್ಲಾಪುರದ ಕೃಷಿಕರೊಬ್ಬರ ಅಡಿಕೆ ತೋಟದಲ್ಲಿ.